ಶ್ರೀ ಹೆಚ್ ಡಿ ರೇವಣ್ಣ: ಎರಡು ದಿನ ಸದನ ಮೂಂದೂಡಬೇಕಾಗಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಿಗಳೇ ಕಾರಣ. ಏಕೆಂದರೆ ನಿಯಮ 60 ರಲ್ಲಿ ಚರ್ಚಿಸಿದ್ದರೆ ಸರ್ಕಾರದ ಹುಳುಕು ಹೊರಗೆ ಬರುತ್ತದೆಂದು ಹೇಳಿ ಚರ್ಚೆ ಮುಂದಕ್ಕೆ ಹಾಕಿದ್ದಾರೆ. ವಿರೋಧ ಪಕ್ಷದವರ್ಯಾರು ಇದಕ್ಕೆ ಜವಾಬ್ದಾರರಲ್ಲ. ನಾಳೆ ನಮಗೆ ಅವಕಾಶ ಕೊಡಬೇಕು.

ಅಧ್ಯಕ್ಷರು: ನಾನು ಈಗ ಶೂನ್ಯವೇಳೆಯಲ್ಲಿ ಶ್ರೀಕಾಂತ ಕುಲಕರ್ಣಿಯವರನ್ನು ಕರೆದಿದ್ದೇನೆ.

ಇ) **ವಿಷಯ:** ಕರ್ನಾಟಕ ರಾಜ್ಯದ ಕೃಷ್ಣಾನದಿಯ ಜ್ವಲಂತ ಸಮಸ್ಯೆಯ ಬಗ್ಗೆ.

ಶ್ರೀ ಶ್ರೀಕಾಂತ ಕುಲಕರ್ಣಿ (ಜಮಖಂಡಿ): ನಾನು ಕರ್ನಾಟಕ ರಾಜ್ಯದ ಕೃಷ್ಣಾನದಿಯ ಜ್ವಲಂತ ಸಮಸ್ಯೆ ಕುರಿತು ಈ ಸಂದರ್ಭದಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವುದಕ್ಕೆ ಇಚ್ಚಿಸುತ್ತೇನೆ. ಕರ್ನಾಟಕ ರಾಜ್ಯಕ್ಕೆ ಕೃಷ್ಣಾ ನದಿಯ ನೀರಿನ ಹಕ್ಕನ್ನು ಉಪಯೋಗಿಸಲು ಆಂಧ್ರ ಮತ್ತು ಮಹಾರಾಷ್ಟ್ರ ಸರ್ಕಾರಗಳು ಪದೇ ಪದೇ ವಿವಾದ ಮಾಡುತ್ತಿದ್ದು ಇದಕ್ಕೆ ಶಾಶ್ವತವಾಗಿ ವ್ಯಾಜ್ಯ ನಿವಾರಿಸಲು ಕೇಂದ್ರ ಸರ್ಕಾರ ನ್ಯಾಯಮಂಡಳಿಯನ್ನು ರಚನೆ ಮಾಡಿದ್ದು, ಅದು ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ಈ ಬಗ್ಗೆ ರಾಜ್ಯದ ಜನತೆ ಚಿಂತಿತರಾಗಿದ್ದಾರೆ. ಆಲಮಟ್ಟಿ ಡ್ಯಾಂನ ಎತ್ತರವನ್ನು 524 ಮೀಟರ್‌ಗೆ ಹೆಚ್ಚಿಸಲು ರಾಜೀ ಸೂತ್ರ ಪಾಲಿಸಲು ಆಂಧ್ರ ಸರಕಾರ ತಿರಸ್ಕರಿಸಿದ ಹಿನ್ನಲೆಯಲ್ಲಿ ನಡೆದ ಘಟನೆಗಳ ಬಗ್ಗೆ ಮತ್ತು ಇಂದು ಪತ್ರಿಕೆಯಲ್ಲಿ ನಿನ್ನೆ ನ್ಯಾಯ ಸಮಿತಿಯವರು ಕೊಟ್ಟಿರುವಂತ ಒಂದು ಪರಿಹಾರದ ವರದಿ ಬಂದಂಥ ಹಿನ್ನೆಲೆಯಲ್ಲಿ ನಿಜವಾಗಿಯೂ ಅಲ್ಲಿ ಏನು ಚರ್ಚೆಯಾಗಿದೆ, ಏನು ನಡೆಯಿತು, ಕರ್ನಾಟಕ ರಾಜ್ಯಕ್ಕೆ.

ಅಧ್ಯಕ್ಷರು: ನೀವು ಮೆನ್‌ಷನ್ ಮಾಡಿ. ವಿವರಗಳಿಗೆ ಹೋಗಬೇಡಿ.

ಶ್ರೀ ಶ್ರೀಕಾಂತ ಕುಲಕರ್ಣಿ (ಜಮಖಂಡಿ): ಈ ಬಗ್ಗೆ ಸರ್ಕಾರ ಏನೇನು ಕ್ರಮ ಕೈಗೊಂಡಿದೆ, ಈ ಬಗ್ಗೆ ಅನೇಕ ಹಿರಿಯ ಪತ್ರಕರ್ತರು ಪತ್ರಿಕೆಗಳಲ್ಲಿ.

ಅಧ್ಯಕ್ಷರು: ಕುಲಕರ್ಣಿಯವರೆ, ನೀವು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದೀರಿ ಇಲ್ಲಿ ವಿವರಗಳಿಗೆ ಅವಕಾಶವಿಲ್ಲ. ಮೆನ್‌ಷನ್ ಮಾಡಿ. ಅವರು ಉತ್ತರ ಹೇಳುತ್ತಾರೆ.

ಶ್ರೀ ಶ್ರೀಕಾಂತ ಕುಲಕರ್ಣಿ (ಜಮಖಂಡಿ): ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಅಲ್ಲಿ ಏನು ಚರ್ಚೆಯಾಗಿದೆ ಆ ಬಗ್ಗೆ.

ಅಧ್ಯಕ್ಷರು: ಚರ್ಚೆಯಾಗಿದೆ ಎಂದರೆ ಬೇರೆ ರೂಪದಲ್ಲಿ ತನ್ನಿ. ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ ನೀವೂ ಎಲ್ಲವನ್ನೂ ಹೇಳಲಿಕ್ಕೆ ಅವಕಾಶವಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಶ್ರೀಕಾಂತ ಕುಲಕರ್ಣಿ (ಜಮಖಂಡಿ): ಸರ್ಕಾರ ಅದನ್ನು ಸರಿಪಡಿಸಿದರೆ ಇಡೀ ರಾಜ್ಯದ ಜನತೆಗೆ ನೆಮ್ಮದಿ ಸಿಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಈಗೇನು ಮಾನ್ಯ ಶ್ರೀಕಾಂತ್ ಕುಲಕರ್ಣಿಯವರು ಪ್ರಸ್ತಾಪಿಸಿದ್ದಾರೆ, ಇದರ ಬಗ್ಗೆ ನಮ್ಮ ಜಲಸಂಪನ್ಮೂಲ ಸಚಿವರು ಅದಕ್ಕೆ ಪ್ರತ್ಯೇಕವಾಗಿ ಉತ್ತರ ಕೊಡುತ್ತಾರೆ. ನಾನು ಅವರ ಗಮನಕ್ಕೆ ತರುತ್ತೇನೆ.

ಈ) ವಿಷಯ: ತುಮಕೂರು ಜಿಲ್ಲೆ ಗೋಪಾಲಪುರದಲ್ಲಿ ಹೊನ್ನಮ್ಮ ಎನ್ನುವ ದಲಿತ ಮಹಿಳೆಯ ಮೇಲೆ ಸುಮಾರು 40 ಜನರ ಗುಂಪು ಕಲ್ಲಿನಿಂದ ಜಜ್ಜಿ ಸಾಯಿಸಿರುವ ಘಟನೆ ಬಗ್ಗೆ.

ಡಾ: ಹೆಚ್ ಸಿ ಮಹಾದೇವಪ್ಪ: ಸೋಮವಾರದ ದಿವಸ ತುಮಕೂರು ಜಿಲ್ಲೆ ಗೋಪಾಲಪುರದಲ್ಲಿ ಹೊನ್ನಮ್ಮ ಎನ್ನುವ ದಲಿತ ಮಹಿಳೆಯ ಮೇಲೆ ಸುಮಾರು ನಲವತ್ತು ಜನರ ಗುಂಪು ಕಲ್ಲಿನಿಂದ ಜಜ್ಜಿ ಸಾಯಿಸಿರತಕ್ಕಂಥ ಘಟನೆ ನಿನ್ನೇ ಇಂಡಿಯನ್ ಎಕ್ಸ್‌ಪ್ರೆಸ್‌ನ ಮುಖಪುಟದಲ್ಲಿ ಬಂದಿದೆ, ಇವತ್ತು ಪ್ರಜಾವಾಣಿಯ ಎಡಿಟೋರಿಯಲ್‌ನಲ್ಲಿ ಬರೆದಿದ್ದಾರೆ. ಹೊನ್ನಮ್ಮ ಒಬ್ಬ ಸ್ವಾಭಿಮಾನಿ ದಲಿತ ಮಹಿಳೆ. ಹೋರಾಟದಲ್ಲಿದ್ದಂಥವಳು. ರಾಜಕೀಯ ಪಕ್ಷದಲ್ಲಿದ್ದು ಯಾರಿಗೂ ತಲೆಬಾಗದೇ ಸ್ವಾಭಿಮಾನದಿಂದ ತನ್ನಲ್ಲಿರತಕ್ಕಂಥ ಸ್ವತಂತ್ರದ ಸಂರಕ್ಷಣೆಯ ಹಕ್ಕಿಗಾಗಿ ಹೋರಾಟ ಮಾಡುತ್ತಿದ್ದಳು. ಅವಳ ಮೇಲೆ ಕಳ್ಳತನದ ಕೇಸ್ ಹಾಕಿ ಪೊಲೀಸರು ಆರೆಸ್ಟ್ ಮಾಡಿ, ಅವಳು ಬೇಲ್‌ನಿಂದ